

# ಕೋಗಿಲೆಯ ಕುಲಬಾಂಧವ ಕೆಂಬೂತ

**ಮನೆಯ ಪಕ್ಕದ ಖಾಲಿ ಸೈಟಿನಲ್ಲಿ ಠಿಕಾಣಿ ಹೂಡಿದ್ದ ಕೆಂಬೂತ ಜೋಡಿ, ತಮ್ಮ ಮರಿಗಳ ಪಾಲನೆ ಪೋಷಣೆ ಮಾಡಿದ ಪರಿ ಕುತೂಹಲಕಾರಿಯಾಗಿತ್ತು.**

■ ಜಿ.ಆರ್. ಪಂಡಿತ್

ಮಳೆಗಾಲದ ಆರಂಭದ ಒಂದು ದಿನ ಮನೆಯ ಪಕ್ಕದ ಖಾಲಿ ಸೈಟಿನ ಪೊದೆಗಳ ಸಂದಿಯಲ್ಲಿ ಕೆಂಬೂತದ ಓಡಾಟ ಕುತೂಹಲ ಮೂಡಿಸಿತ್ತು. ದಿನದ ಅನೇಕ ಬಾರಿ ಕಾಂಪೌಂಡಿನ ಗೋಡೆ ಮೇಲೆ ಓಡಾಡುವುದು, ಪದೇ ಪದೇ ಬಾಯಲ್ಲಿ ಕೀಟಗಳನ್ನು ಕಚ್ಚಿ ಹಿಡಿದು ನಡೆದಾಡುವುದು, ವಿಲಕ್ಷಣ ಕೂಕ್ ಕೂಕ್ ಕೂಗು – ಇವೆಲ್ಲ ಗಮನಿಸಿದಾಗ ಕೆಂಬೂತ ಇಲ್ಲೆಲ್ಲೋ ಗೂಡು ಕಟ್ಟಿರಬಹುದೆಂದು ಅನಿಸತೊಡಗಿತು.

ದೂರದಿಂದಲೇ ಅದರ ಚಲನವಲನಗಳ ಮೇಲೆ ಗಮನವಿರಿಸಿದೆ. ದಟ್ಟ ಪೊದೆಯ ಮಧ್ಯದಲ್ಲಿ ಒಂದಿಷ್ಟು ಒಣ ಕಡ್ಡಿಗಳಿಂದ ನಿರ್ಮಿಸಿದ ಗೂಡು ಕಣ್ಣಿಗೆ ಬಿತ್ತು. ಮೊಟ್ಟೆಗಳು ಇದ್ದಿರಬಹುದಾದರೂ ನಾನು ನಿಂತಲ್ಲಿಂದ ಸರಿಯಾಗಿ ಕಾಣಿಸುತ್ತಿರಲಿಲ್ಲ. ಆಹಾರ ಹೊತ್ತು ತರುತ್ತಿವೆ ಅಂದರೆ, ಮೊಟ್ಟೆ ಒಡೆದು ಮರಿಗಳು ಹೊರಬಂದಿರಬಹುದೆಂದು ಊಹಿಸಿದೆ. ಮರುದಿನ ನೋಡುವಾಗ ನನ್ನ ಊಹೆ ನಿಜವಾಗಿತ್ತು. ಎರಡು ಚಿಕ್ಕ ಚಿಕ್ಕ ಮರಿಗಳು ಪೊದೆಯ ಬಳಿ ನೆಲದ ಮೇಲೆ ಓಡಾಡುತ್ತಿದ್ದವು. ದೂರ ಹಾರಲಾಗದೇ ನಿಂತಲ್ಲಿಯೇ ಎಗರಿ ಎಗರಿ ಬೀಳುತ್ತ, ಏಳುತ್ತ ತಾಯಿ ಹಕ್ಕಿ ತರುವ ಆಹಾರಕ್ಕೆ ಬಾಯರಳಿಸಿ ಕಾಯುತ್ತಿದ್ದವು. ಹೊಟ್ಟೆ ತುಂಬಿದ ಬಳಿಕ ಪಕ್ಕದ ಗಿಡದ ಒಣ ಕೊಂಬೆಯ ಮೇಲೇರಿ, ಪುಟ್ಟ ರೆಕ್ಕೆಗಳನ್ನು ಬಿಚ್ಚಿ ಹಾರುವ ತವಕ ತೋರಿಸುತ್ತಿದ್ದವು. ಖಾಲಿ ಸೈಟಿನ ತುಂಬೆಲ್ಲ ಚಟ ಪಟ ಹೆಜ್ಜೆ ಇಟ್ಟು ನಡೆಯತೊಡಗಿದ್ದವು.

‘ಕೆಂಬೂತ’ ಕೋಗಿಲೆಗಳ ವರ್ಗಕ್ಕೆ ಸೇರಿದ ಪಕ್ಷಿ. ಆದರೆ ಕೋಗಿಲೆಗಿಂತ ಗಾತ್ರದಲ್ಲಿ ದೊಡ್ಡದು. ಬೆನ್ನಿನ ಭಾಗ, ರೆಕ್ಕೆಗಳು ತಾಮ್ರದಂತೆ ಹೊಳೆವ ಕೆಂಗಂದು ಬಣ್ಣದಿಂದ ಕೂಡಿರುತ್ತವೆ. ಈ ಪಕ್ಷಿಯ ವಿಶಿಷ್ಟತೆ, ಅದರ ಮಾಣಿಕ್ಯದ ಹರಳಿನಂಥ ಕೆಂಪು ಬಣ್ಣದ ಹೊಳಪಿನ ಕಣ್ಣುಗಳು.

ಕೋಗಿಲೆಯ ಗುಂಪಿಕ್ಕೆ ಸೇರಿದ್ದರೂ ಇವು ಸಂತತಿಯ ಪಾಲನೆ ವಿಷಯದಲ್ಲಿ ಪರಾವಲಂಬಿಗಳಲ್ಲ. ಪರರ ಗೂಡಿನಲ್ಲಿ ಮೊಟ್ಟೆ ಇಟ್ಟು ಬರುವುದಿಲ್ಲ. ಹೆಣ್ಣು ಕೆಂಬೂತಗಳು ಕೆಲವು ಸಂದರ್ಭ ಸಂತಾನ ಪಾಲನೆಯಲ್ಲಿ ಅನಾಸಕ್ತಿ ತೋರುತ್ತವೆಯಾದರೂ, ಗಂಡು ಕೆಂಬೂತಗಳು ಸಂತಾನ ಪಾಲನೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಕೆಂಬೂತಗಳು ಸಾಧಾರಣವಾಗಿ ಮುಂಗಾರು ಮಳೆಗಾಲದ ನಂತರ, ಜೂನ್‌ನಿಂದ ಸೆಪ್ಟೆಂಬರ್ ತಿಂಗಳಿನ ಅವಧಿಯಲ್ಲಿ, ಸಂತಾನಾಭಿವೃದ್ಧಿ ಕ್ರಿಯೆಯಲ್ಲಿ ತೊಡಗುತ್ತವೆ. ಸಂಗಾತಿಗಳು ಒಂದನ್ನೊಂದು ಅರಸಿ ಓಡುವುದು, ಗಂಡು ಹಕ್ಕಿ ಆಹಾರವನ್ನು ಉಡುಗೊರೆಯಾಗಿ ಕೊಡುವುದು, ಹೀಗೆ ರಾಸಕ್ರೀಡೆ ಪ್ರಾರಂಭವಾಗುತ್ತದೆ. ಹೆಣ್ಣು ಹಕ್ಕಿ ರೆಕ್ಕೆಗಳನ್ನು ಕೆಳಗಿಳಿಸುವುದರ ಮೂಲಕ ತನ್ನ ಒಪ್ಪಿಗೆ ಸೂಚಿಸುತ್ತದೆ.

ಮೂರರಿಂದ ಎಂಟು ದಿನಗಳಲ್ಲಿ ಗಂಡು ಹಕ್ಕಿ,



ಆಳದ ಬಟ್ಟಲಿನಂತಹ ಗೂಡನ್ನು ದಟ್ಟವಾಗಿ ಹಬ್ಬಿರುವ ಬಳ್ಳಿಗಳಲ್ಲಿ, ಬಿದಿರು ಪೊದೆಗಳಲ್ಲಿ, ಈಚಲು ಮರದ ಮೇಲೆ ಕಟ್ಟುತ್ತವೆ. ಸಾಮಾನ್ಯವಾಗಿ ಒಮ್ಮೆ 3ರಿಂದ 5 ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳ ಸುಣ್ಣದಂತಹ ತೊಗಟೆ ಮೇಲೆ ಹಳದಿ ಬಣ್ಣದ ಹೊಳಪು ಇರುತ್ತದೆ. ಈ ಹೊಳಪು ದಿನಗಳೆದಂತೆ ಕಡಿಮೆಯಾಗುತ್ತ ಬರುತ್ತದೆ. ಹೆಣ್ಣು ಮತ್ತು ಗಂಡು ಹಕ್ಕಿಗಳೆರಡೂ ಗೂಡು, ಮೊಟ್ಟೆ, ಮರಿಗಳ ಪಾಲನೆಯಲ್ಲಿ ತೊಡಗುತ್ತವೆಯಾದರೂ, ಗಂಡು ಹಕ್ಕಿಯೇ ಪ್ರಧಾನವಾಗಿ ಮರಿಗಳ ಪೋಷಣೆಯ ಜವಾಬ್ದಾರಿ ವಹಿಸುತ್ತದೆ. 15ರಿಂದ 16 ದಿನಗಳಲ್ಲಿ ಕಾವಿಟ್ಟ ಮೊಟ್ಟೆಗಳು ಮರಿಯಾಗಿ, 18ರಿಂದ 22 ದಿನಗಳಲ್ಲಿ ಹಾರಲು ಸಿದ್ಧವಾಗುತ್ತವೆ.

ವಿವಿಧ ರೀತಿಯ ಕೀಟಗಳು, ಹುಳಗಳು, ಧಾನ್ಯಗಳು, ಹಣ್ಣು ಮತ್ತದರ ಬೀಜಗಳು, ಚಿಕ್ಕ ಹಾವುಗಳು, ಬೇರೆ ಹಕ್ಕಿಗಳ ಮೊಟ್ಟೆಗಳು ಇದರ ಮುಖ್ಯ ಆಹಾರ. ಇದರ ರೆಕ್ಕೆಗಳು ಅಷ್ಟೊಂದು ಬಲಿಷ್ಠವಲ್ಲ. ಹೆಚ್ಚಾಗಿ ನಡೆಯುವ ಏರುವ ಕ್ರಿಯೆಗಳಲ್ಲೇ ಆಹಾರ ಸಂಪಾದಿಸಿಕೊಳ್ಳುತ್ತವೆ. ಅನ್ಯ ಹಕ್ಕಿಗಳು ಮೊಟ್ಟೆ ಇಟ್ಟ ಜಾಗವನ್ನು ಹುಡುಕಿ, ಗೂಡಿಗೆ ನುಗ್ಗಿ ಮೊಟ್ಟೆಗಳನ್ನು ತಿನ್ನುವುದರಿಂದ ಹಕ್ಕಿಗಳ ಸಂತತಿಗೆ ಇವು ಒಂದು ರೀತಿ ಮಾರಕ. ಪಾಮ್ ಮರದ ಹಣ್ಣನ್ನು ತುಂಬಾ ಇಷ್ಟಪಡುತ್ತವೆ. ಹಾಗಾಗಿ ಪಾಮ್ ಮರದ ವ್ಯವಸಾಯ ಮಾಡುವವರಿಗೆ ಇವು ಬೆಳೆ ನಾಶಕ ಹಕ್ಕಿಗಳು.

ಕನ್ನಡದಲ್ಲಿ ಕುಪ್ಪುಳಕ್ಕಿ, ಕೆಂಬತ್ತು, ಭಾರದ್ವಾಜ ಹಕ್ಕಿ, ಸ್ವರ್ಣ ಪಕ್ಷಿ ಮುಂತಾದ ಹೆಸರಿನಿಂದ ಕೆಂಬೂತವನ್ನು ಕರೆಯುತ್ತಾರೆ. ಅನೇಕ ಸಮುದಾಯದ ಜನ ಈ ಪಕ್ಷಿಯನ್ನು ನೋಡುವುದು ಶುಭ ಶಕುನ ಎಂದೇ ಭಾವಿಸುತ್ತಾರೆ. ಇದರ ಕೂಗು ಶಂಖನಾದವನ್ನು ಹೋಲುವುದರಿಂದ ಶುಭ ಸೂಚಕ ಎಂದು ಪರಿಗಣಿಸುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in